ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು. ತಿಪಟೂರು ಮತ್ತು ಅರಸಿಕೆರೆ ನಗರಗಳಿಗೆ ಕುಡಿಯುವ ನೀರಿನ ಕೊರತೆ ಇದೆ. ಈ ಕೊರತೆಯನ್ನು ನೀಗಿಸಲು ಪುರಸಭೆಯು ಹೇಮಾವತಿ ನೀರನ್ನು ಸರಬರಾಜು ಮಾಡಲು 7.01 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಕೈಗೆತ್ತಿ ಕೊಂಡಿದೆ.

ಆ) ಹೌದು. ಕೆಲವು ಬೊರೆವೆಲ್‌ಗಳಲ್ಲಿ ನೀರು ಕಡಿಮೆ ಆಗಿದೆ. ಆದ ಕಾರಣ ಪುರಸಭೆಯು ಹೇಮಾವತಿ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಂಡಿದೆ.

Pipeline works of Hemavathy Canal

543 - Sri. B. Nanjamari (Tiptur) : Will be Minister for Urban Development be pleased to state.

1) The pipeline works of Hemavathy Canal though completed, when the water will be let into the Tank? whether the Govt., has fixed any specific target or time for this scheme?

Sri Vaijanatha patil (Minister for Urban Development) :

1. The pipeline work of 1000 mm dia RCC pipe to let waer from Hemavathy Canal to Echanur Tank for drinking water supply purpose to Tiptur and Arasikere Towns is completed. Action will be taken to pump water to tank by installing pumpsets by June 1996. Also water will be filled in the tank from Canal by laying 700 mm dia R.C.C. pipes through gravity. It is proposed to commission the water supply Scheme by the end of Sept. 96.

ಧಾರವಾಡ ಜಿಲ್ಲೆ ರಾಯಪುರದಲ್ಲಿರುವ ಸಿಲ್ಕ್ ಎಕ್ಸೆಚೇಂಜನ್ನು ಗದಗ್‌ಗೆ ವರ್ಗಾವಣೆ

544 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ರಾಯಪುರದಲ್ಲಿರುವ ಸಿಲ್ಕ್ ಎಕ್ಸಚೇಂಜನ್ನು ಗದಗ್‌ಗೆ ವರ್ಗಾಯಿಸಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಗದಗ್ ಹಾಗೂ ಸುತ್ತಮುತ್ತಲಿನ ರೇಷ್ಮೆ ಕೃಷಿಕರ ಅನುಕೂಲಕ್ಕಾಗಿ ಸಿಲ್ಕ ಎಕ್ಸ್‌ಚೇಂಜನ್ನು ಗದಗ್‌ಗೆ ಎಂದು ವರ್ಗಾಯಿಸಲಾಗುವುದು?